
# ನರಕವನ್ನು ಕುರಿತ ಸತ್ಯ

ಅಧ್ಯಯನ #15



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 15

# ನರಕವನ್ನು ಕುರಿತಾದ ಸತ್ಯ

**ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಈ ದಿನ ನಾವು "**ನರಕ**" ವಿಷಯ ಕುರಿತು ಅಭ್ಯಾಸ ಮಾಡೋಣ! ಆತ್ಮವನ್ನು ಕುರಿತು ಅಭ್ಯಾಸ ಮಾಡಿದ ನಂತರ ಅದು ಸಾಯುತ್ತದೆ ಮತ್ತು ಮರಣದ ನಂತರ **ಅದು ಬದುಕುವುದಿಲ್ಲ** ಅಥವಾ ಇರುವುದಿಲ್ಲವೆಂದು ನೋಡಿದೆವು. ಈಗ ನರಕವೆಂದರೆ ಏನೆಂದು ಅಭ್ಯಾಸ ಮಾಡೋಣ!!

ಸಾಮಾನ್ಯವಾಗಿ ಎಲ್ಲಾ ಮತಗಳಲ್ಲಿಯೂ ನರಕವೆಂದರೆ **ಸಾಯದಿರುವ ಮತ್ತು ಅಮರವಾದ ಆತ್ಮವು** ಎಂದೆಂದಿಗೂ **ಬೆಂಕಿ ಉರಿಯುವ ಸ್ಥಳದಲ್ಲಿ ಶಿಕ್ಷೆಯನ್ನು** ಅನುಭವಿಸುವ ಯಾತನೆಯ ಸ್ಥಳವೆಂದು ಅಂದುಕೊಂಡಿದ್ದಾರೆ.



ದೇವರೇ ನರಕವನ್ನು **ಸೃಷ್ಟಿಸಿ** ಈ ವ್ಯವಸ್ಥೆಯನ್ನು ಮಾಡಿದ್ದಾರೆಂದು ನಂಬಲಾಗುತ್ತದೆ

ಇದಲ್ಲದೆ ಸೈತಾನನು "ನರಕದ ಕಾವಲುಗಾರ" ಮತ್ತು ಆತನು ಹೇಗೋ **ಬೆಂಕಿಯು ಪ್ರತಿರೋಧ ಶಕ್ತಿಯುನ್ನು** ಹೊಂದಿರುವುದಲ್ಲದೆ ನರಕದಲ್ಲಿ ಸುಖವಾಗಿದ್ದು ನರಕವನ್ನು **ಮನೆಯನ್ನಾಗಿ** ಮಾಡಿಕೊಂಡಿದ್ದಾನೆಂದು ನಂಬುತ್ತಾರೆ!!

ಅನೇಕ "ದೇವ ಮನುಷ್ಯರು" ಇವೆಲ್ಲವನ್ನೂ ಚಿತ್ರಾತ್ಮಕವಾಗಿ ಪುಸ್ತಕಗಳಲ್ಲಿ, ಕೈಪಿಡಿಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ದಾಖಲಿಸಿ ವಿವರಿಸಿದ್ದಾರೆ ಮತ್ತು ನರಕವನ್ನು "ದರ್ಶನದಲ್ಲಿ" ನೋಡಿದ್ದಾಗಿಯೂ ಅಥವಾ ಆತ್ಮದಲ್ಲಿ ನರಕಕ್ಕೆ ಭೇಟಿ ನೀಡಿರುವುದಾಗಿಯೂ ತಿಳಿಸಿರುತ್ತಾರೆ.




## The Well to Hell




While drilling the world's deepest hole in Siberia, the geologists noticed the drill bit began to rotate abnormally, among other strange happenings, when they reached a depth of ten miles. They measured temperatures up to 2000 degrees at the deepest part, and then lowered a microphone into the pit. After hearing the sounds of all the suffering souls in hell, they stopped the project in the hope that what is down there will stay down there.

**"ಪರಲೋಕದ ಬಾಗಿಲುಗಳು ಮತ್ತು ನರಕದ ಉರಿಯುತ್ತಿರುವ ಅಗ್ನಿಗಳು"** ಎಂಬ ಹೆಸರಾಂತ ಚಲನಚಿತ್ರವೂ ಬಿಡುಗಡೆಯಾಗಿದೆ.

ಮತ್ತು ಇತ್ತೀಚೆಗೆ ಒಬ್ಬ ಬೋಧಕರು **"ನರಕದ ಶಬ್ಧಗಳು"** ಎಂಬ **"ಧ್ವನಿ ಸುರಳಿ"** ಯನ್ನು ಬಿಡುಗಡೆ ಮಾಡಿ ಇದು ಸೈಬೀರಿಯಾದ ಆಳವಾದ ಸುರಂಗದಿಂದ ಈ ಶಬ್ಧವನ್ನು ದಾಖಲು

**ಮಾಡಿ, ಇದು ನರಕದಲ್ಲಿ ಸಾವಿರಾರು ಆತ್ಮಗಳು ನರಳುತ್ತಿರುವ ಶಬ್ಧವೆನ್ನುತ್ತಾರೆ.**

ಇದಲ್ಲದೆ ಆ ಬೋಧಕರು ಹೀಗೆ ಹೇಳಿದ್ದಾರೆ – "ನೀನು ನನ್ನನ್ನು ನಂಬದಿದ್ದರೆ, ಸತ್ತು ನೀನೇ ಹೋಗಿ ನೋಡು"!


## ಇದೆಲ್ಲಾ ನಿಜವೇ? ದೇವರ ಸತ್ಯವೇದವು ಹೀಗೆ ಬೋಧಿಸುತ್ತದೆಯೇ?

ಸತ್ಯವೇದದಲ್ಲಿ ಇದನ್ನು ಕುರಿತು ವಿಶ್ಲೇಷಿಸುವುದಕ್ಕೆ (ಹುಡುಕುವುದಕ್ಕೆ) ಮೊದಲು ನ್ಯಾಯಾಲಯದಲ್ಲಿ ನಡೆದ ಒಂದು ಸಂಗತಿಯನ್ನು ನೋಡೋಣ –

ಒಬ್ಬ **ಕಳ್ಳನು ಮನೆಯ** ಒಡವೆಗಳನ್ನು ದರೋಡೆ ಮಾಡಿದ್ದಕ್ಕಾಗಿ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಾಗ **ಇಬ್ಬರು ಸಾಕ್ಷಿಗಳು ನ್ಯಾಯಾಲಯದಲ್ಲಿ ಕುಳಿತಿದ್ದರು.**

ಒಬ್ಬನು ಆ ಕಳ್ಳನನ್ನು "**ನೇಣು**" ಶಿಕ್ಷೆಗೆ ಗುರಿಪಡಿಸಬೇಕೆಂದು ಹೇಳಿದನು!

ಆದರೆ ಮತ್ತೊಬ್ಬನು ತಕ್ಷಣ ಹೀಗೆ ಉತ್ತರಿಸಿದನು –



**"ನೀನು ಹುಚ್ಚನೋ, ಅದು ಅನ್ಯಾಯ! ಆತನು ದರೋಡೆ ಮಾಡಿದ್ದಾನಷ್ಟೆ – ಕೊಲೆಯಲ್ಲ"!**

ಆದರೆ ಮೊದಲನೆಯವನು ಹೀಗೆ ಉತ್ತರಿಸಿದನು ಇಲ್ಲ ಇಂತಹ ದಂಡನೆಯಿಂದ ಬೇರೆ ಎಲ್ಲಾ ಕಳ್ಳರಿಗೂ ಒಂದು ಎಚ್ಚರಿಕೆಯಾಗಿರುವುದು ಮತ್ತು ಇನ್ನು ಮುಂದೆ ಕಳ್ಳತನ ಮಾಡಲು ಹಿಂಜರಿಯುವರು.

ಮತ್ತೊಬ್ಬನು ಹೀಗೆ ಉತ್ತರಿಸಿದನು "ಇರಬಹುದು, ಆದರೆ ನ್ಯಾಯವಾದ ಶಿಕ್ಷೆಯನ್ನು ವಿಧಿಸಬೇಕು!!"

## ಸಾಧಾರಣ ಮನುಷ್ಯರ ತಿಳುವಳಿಕೆ ಹೀಗಿದೆ - ಅಪರಿಪೂರ್ಣವಾದ ಪಾಪಿ ಮನುಷ್ಯನು!



- **ಹೀಗಿರುವಾಗ ಪಾಪಕ್ಕಾಗಿ ದೇವರು ಮತ್ತು ಆತನ ಶಿಕ್ಷೆ ಹೇಗಿರಬಹುದು?**
- **ದೇವರು ಪಾಪಕ್ಕಾಗಿ ನ್ಯಾಯವಾದ ಶಿಕ್ಷೆ ವಿಧಿಸುವುದಿಲ್ಲವೆ?**
- **ದೇವರು ನ್ಯಾಯಸ್ಥಾಪಕನಲ್ಲವೆ?**

ದೇವರ ಸಿಂಹಾಸನದ ಅಸ್ಥಿವಾರವು ನ್ಯಾಯವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

### ಕೀರ್ತನೆ 89:14

**"ನೀತಿನ್ಯಾಯಗಳು ನಿನ್ನ ಸಿಂಹಾಸನದ ಅಸ್ಥಿವಾರವು; ನಿನ್ನ ಸಾನಿಧ್ಯ ದೂತರು ಪ್ರೀತಿ ಸತ್ಯತೆಗಳೇ"**

ಹಾಗಾದರೆ ಮನುಷ್ಯರ ಪಾಪಗಳಿಗೆ **ನ್ಯಾಯವಾದ ದಂಡನೆ** ಯಾವುದು –

ಮನುಷ್ಯ ಜಾತಿಯು ಪಾಪಿಗಳೆಂದು **ಎಲ್ಲರೂ** ಒಪ್ಪಿಕೊಳ್ಳುತ್ತಾರೆ ಮತ್ತು **ಪಾಪಕ್ಕಾಗಿ** ದಂಡನೆಯನ್ನು ಹೊಂದಬೇಕು.

**ಆದರೆ ಮನುಷ್ಯರ ಪಾಪಗಳಿಗೆ ನ್ಯಾಯವಾದ ದಂಡನೆ ಯಾವುದು?**

ಮುಂದೆ ನೋಡೋಣ–




- ಮನುಷ್ಯನ ಜೀವಿತದಲ್ಲಿ ಪ್ರತಿದಿನ 24 ಗಂಟೆಗಳಿರುತ್ತವೆ
- ನಿದ್ರಿಸುವುದರಲ್ಲಿ 8 ಗಂಟೆಗಳು ವ್ಯಯವಾಗುತ್ತವೆ
- ಕೆಲಸದಲ್ಲಿ 8 ಗಂಟೆಗಳು ವ್ಯಯವಾಗುತ್ತವೆ

ಊಟ, ಸ್ನಾನ ಇತರೆಗಳಲ್ಲಿ ಸುಮಾರು 2 ಗಂಟೆಗಳು ವ್ಯಯವಾಗುತ್ತವೆ.

ಉಳಿದಿರುವ 6 ಗಂಟೆಗಳು ಆ 6 ಗಂಟೆಗಳಲ್ಲಿ **ಪ್ರತಿನಿಮಿಷವೂ** ಮನುಷ್ಯನು **ಎಡೆಬಿಡದೆ** ಪಾಪ ಮಾಡುತ್ತಾನೆಂದುಕೊಳ್ಳೋಣ! (ಅಂದರೆ ದಿನದ ¼ ಭಾಗ) ಆದ್ದರಿಂದ ಒಬ್ಬ ಮನುಷ್ಯನ ಜೀವಿತ ಕಾಲವು 80 ವರ್ಷಗಳಾದರೆ ಅವನು(ಳು) 20 ವರ್ಷಗಳು ಪಾಪ ಮಾಡುವವನಾಗಿದ್ದಾನೆ (80 ವರ್ಷಗಳ ¼ ಭಾಗ)

**ಆ 20 ವರ್ಷಗಳ ಪಾಪಕ್ಕೆ ಅವನಿಗೆ(ಳಿಗೆ) ಏನು ನ್ಯಾಯವಾದ ಶಿಕ್ಷೆ ಕೊಡಬೇಕು ?**

– 20 **ನೂರು ಕೋಟಿ ವರ್ಷಗಳ ಕಾಲ ಅಗ್ನಿ ನರಕವೇ?**

20 **ಮಿಲಿಯನ್, ಬಿಲ್ಲಿಯನ್ ವರ್ಷಗಳು? ನಿತ್ಯತ್ವ?**



**ಹೀಗೆಯೇ ನಾವು ಅಂದುಕೊಂಡಿದ್ದೇವಲ್ಲವೇ ?**

**ಇದು ನ್ಯಾಯವೇ? ಸ್ವಲ್ಪ ಯೋಚಿಸಿ ನೋಡಿರಿ?**

ಮನುಷ್ಯರ ಪಾಪಗಳಿಗಾಗಿ ಅಷ್ಟು ದೊಡ್ಡ ದಂಡನೆಯಿದೆ ಎಂದು ಸತ್ಯವೇದವು **ಬೋಧಿಸುತ್ತದೆಯೇ** ?

**ಇಲ್ಲ!**

ನಾವು ಪಾಪಕ್ಕೆ ಕೊಡುವ ದಂಡನೆಯನ್ನು ಕುರಿತು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ರೋಮಾ 6:23**

**"ಪಾಪವು ಕೊಡುವ ಸಂಬಳ ಮರಣ...."**

**ಹೌದು! ಹಾಗಾದರೆ ನರಕ........... ಎಂದರೇನು?**

**ನರಕವನ್ನು ಕುರಿತಾದ ಸತ್ಯಗಳೇನು?**

**ನಾವೆಲ್ಲರೂ ತಿಳಿದುಕೊಳ್ಳಬೇಕೆಂದಿದ್ದೇವಲ್ಲವೆ ?**


ನಮ್ಮ ಅಭ್ಯಾಸವನ್ನು ಆರಂಭಿಸೋಣ –

ಹೆಲ್ (Hell) ಎಂಬುದು ಆಂಗ್ಲಪದ ದಿಂದ ಬಂದಿದೆ.

ತಮಿಳಿನಲ್ಲಿ "**ನರಗಂ**" ಎನ್ನುತ್ತಾರೆ

ಹಿಂದಿಯಲ್ಲಿ "**ನರಕ್**" ಎನ್ನುತ್ತಾರೆ ಮತ್ತು ಉರ್ದುವಿನಲ್ಲಿ "**ಡೋಃಝಾಕ್**" ಎನ್ನುತ್ತಾರೆ.

ಆಂಗ್ಲಪದವಾದ ಹೆಲ್




ಗೆ ನಿಜವಾದ ಅರ್ಥ "ಬಚ್ಚಿಡುವುದು" ಅಥವಾ "ಮರೆಮಾಡುವುದು / ಮುಚ್ಚಿಡುವುದು" (**ಹಳೆಯ ನಿಘಂಟನ್ನು (Old dictionary) ಓದಿ ನೋಡಿರಿ**)

ಆದ್ದರಿಂದ ಯೂರೋಪಿನ ರೈತರು ಹೀಗೆ ಹೇಳುತ್ತಿದ್ದರು –

"**ನಾನು ನನ್ನ ಮನೆಯನ್ನು ನರಕದಲ್ಲಿಡಬೇಕು**" ಅಂದರೆ ತನ್ನ ಮನೆಯ ಮೇಲು ಛಾವಣಿಯನ್ನು ಒಣ ಹುಲ್ಲಿನಿಂದ ಹೊದಿಸಬೇಕು ಎಂದು ಅರ್ಥವಾಗುತ್ತದೆ ಅಥವಾ

"**ನಾನು ನನ್ನ ಆಲೂಗಡ್ಡೆಯನ್ನು ನರಕದಲ್ಲಿಡಬೇಕು**" ಅಂದರೆ ನನ್ನ ಆಲೂಗಡ್ಡೆಯನ್ನು ಹೊಲದಲ್ಲಿ ಹೂತಿಡಬೇಕು ಎಂದು ಅರ್ಥವಾಗುತ್ತದೆ.

ಆದರೆ ನರಕದ ಅರ್ಥವೇ ಬೇರೆಯಾಗಿಬಿಟ್ಟಿದೆ!

**ನರಕದ ಅರ್ಥ "ಯಾತನೆಯ ಸ್ಥಳ"**

ಈಗ ಸತ್ಯವೇದದಲ್ಲಿ ಕೊಟ್ಟಿರುವ ಸತ್ಯವನ್ನು ಕುರಿತು ನೋಡೋಣ–

ಆಂಗ್ಲ ಸತ್ಯವೇದದಲ್ಲಿ **ನರಕ** ಎಂಬುದಕ್ಕೆ 4 ವಿಧವಾದ ಪದಗಳನ್ನು ಉಪಯೋಗಿಸಿದ್ದಾರೆ

ಇಬ್ರಿಯ ಭಾಷೆಯಲ್ಲಿ **ಒಂದು** ಪದ ಮತ್ತು ... ಗ್ರೀಕ್‌ನಲ್ಲಿ **ಮೂರು** ಪದಗಳು ...



## ಹಳೆಯ ಒಡಂಬಡಿಕೆ
(ಇಬ್ರಿಯ ಭಾಷೆ)

## ಹೊಸ ಒಡಂಬಡಿಕೆ
(ಗ್ರೀಕ್ ಭಾಷೆ)



- **ಶಿಯೋಲ್** (Sheol)

- **ಹೇಡ್ಸ್** (Hades)
- **ಟಾರ್ಟರೂ** (Tartaroo)
- **ಗೆಹೆನ್ನಾ** (Gehenna)

ಸತ್ಯವೇದದಲ್ಲಿ ಈ ಪದಗಳ ಅರ್ಥವನ್ನು ಕುರಿತು ಅಭ್ಯಾಸ ಮಾಡುವಾಗ ನಮಗೆ ಸತ್ಯವು ಪ್ರಕಟವಾಗುತ್ತದೆ!

ನರಕ ಎಂಬ ಪದವು ಸತ್ಯವೇದದಲ್ಲಿ 53 ಸಾರಿ ಬರುತ್ತದೆ.

- ಹಳೆಯ ಒಡಂಬಡಿಕೆಯಲ್ಲಿ **31** ಸಲ
- ಮತ್ತು **ಹೊಸ ಒಡಂಬಡಿಕೆಯಲ್ಲಿ 22** ಸಲ

ಈಗ ಮೊದಲು **ಹಳೆಯ ಒಡಂಬಡಿಕೆಯಲ್ಲಿ** ಅಭ್ಯಾಸ ಮಾಡೋಣ –



# ಶಿಯೋಲ್ (SHEOL) 31 ಸಲ

ಇಬ್ರಿಯ ಭಾಷೆಯಲ್ಲಿ ನರಕ ಎಂಬುದಕ್ಕೆ ಶಿಯೋಲ್ ಎಂದು ಭಾಷಾಂತರಿಸಲಾಗಿದೆ.

ಹಳೆಯ ಒಡಂಬಡಿಕೆಯಲ್ಲಿ **ಶಿಯೋಲ್** ಎಂಬ ಪದವನ್ನು ಒಟ್ಟು 65 ಸಲ ನೋಡಬಹುದು!!

31 ಸಲ **ನರಕವೆಂದು** ಭಾಷಾಂತರಿಸಲಾಗಿದೆ

31 ಸಲ ಗೋರಿ ಅಥವಾ **ಪಾತಾಳವೆಂದು** ಭಾಷಾಂತರಿಸಲಾಗಿದೆ

3 ಸಲ **ಕುಳಿ** ಎಂದು ಭಾಷಾಂತರಿಸಲಾಗಿದೆ

**ಹೌದು ! ... ಒಟ್ಟು 65 ಸಲ**

**ಇದು ವಿಚಿತ್ರವಾಗಿದೆಯಲ್ಲವೇ?**

**ಹಾಗಾದರೆ ಶಿಯೋಲ್ ಎಂಬ ಪದಕ್ಕೆ ನಿಜವಾದ ಅರ್ಥವೇನು?**

**ಈ ಒಂದೇ ಒಂದು ಪದಕ್ಕೆ ಏಕೆ ಹೀಗೆ ವ್ಯತ್ಯಾಸದ ಅರ್ಥಗಳನ್ನು ಕೊಡಲಾಗಿದೆ?**

ಈ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಲು ಸತ್ಯವೇದದಲ್ಲಿನ ಕೆಲವು ವಾಕ್ಯಗಳಲ್ಲಿ **ಶಿಯೋಲ್** ಎಂಬ ಪದ ಬರುವುದನ್ನು ನೋಡೋಣ – ಮೊದಲನೆಯದಾಗಿ ಕೆಳಗಿನ ವಾಕ್ಯವನ್ನು ನೋಡೋಣ –

### ಕೀರ್ತನೆ 9:17

**"ದುಷ್ಟರು ಅಂದರೆ ದೇವರನ್ನು ಅಲಕ್ಷ್ಯ ಮಾಡುವ ಜನಾಂಗಗಳವರೆಲ್ಲಾ ಪಾತಾಳಕ್ಕೆ ಇಳಿದುಹೋಗುವರು."**

ಕೆ.ಜಿ.ವಿ. **(K.J.V.)** ಮತ್ತು ಎನ್.ಐ.ವಿ. **(N.I.V.)** ಸತ್ಯವೇದದಲ್ಲಿ ಈ ಪದಗಳನ್ನು ಅಭ್ಯಾಸ ಮಾಡುವಾಗ ನಮಗೆ ಮನವರಿಕೆಯಾಗುವುದೇನೆಂದರೆ ....

ಎನ್. ಐ. ವಿ. ಯಲ್ಲಿ ನೋಡುವಾಗ "ತಿರುಗಿ ಹೋಗುವುದು" ಎಂಬ ಅರ್ಥ ಬರುತ್ತದೆ. ಒಬ್ಬನು(ಳು) ಮೊದಲೇ ಇದ್ದ ಜಾಗಕ್ಕೆ ಮಾತ್ರವೇ ಹಿಂತಿರುಗಲು ಸಾಧ್ಯ. "ದುಷ್ಟರು" ಮೊದಲು ನರಕದಿಂದ ಬಂದು, ನಂತರ ನರಕಕ್ಕೆ ಹಿಂತಿರುಗುವಂತೆ ತೋರುತ್ತದೆ! ಮತ್ತೆ ಬಂದಿದ್ದು ಹಿಂತಿರುಗುವುದಕ್ಕೆ ಮಾತ್ರವೇ.

### ಇದರ ಅರ್ಥವೇನು ?

ಇದಲ್ಲದೆ "ಶಿಯೋಲ್" ಎಂಬ ಪದಕ್ಕೆ ಕೆ.ಜಿ.ವಿ. ಯಲ್ಲಿ "**ನರಕ**"ವೆಂದು ಮತ್ತು ಎನ್.ಐ.ವಿ.ಯಲ್ಲಿ "ಗೋರಿ" ಅಥವಾ ಪಾತಾಳವೆಂದು ಭಾಷಾಂತರಿಸಲಾಗಿದೆ.

**ಹಾಗಾದರೆ "ನರಕ" ಮತ್ತು "ಗೋರಿ" ಎರಡೂ ಅರ್ಥದಲ್ಲಿ ಒಂದೇ ಆಗಿದೆಯೇ?**

**ಈ ನಿರ್ಧಾರಕ್ಕೆ ನಾವು ಬರಬೇಕೆ??**

ಆಹಾ! ಇನ್ನೊಂದು ವಾಕ್ಯವನ್ನು ನೋಡೋಣ –

### ಆದಿಕಾಂಡ 37:35

**"ಅವನ ಗಂಡುಮಕ್ಕಳೂ ಹೆಣ್ಣು ಮಕ್ಕಳೂ ಎಲ್ಲರೂ ದುಃಖಶಮನ ಮಾಡುವದಕ್ಕೆ ಪ್ರಯತ್ನಿಸಿದಾಗ್ಯೂ.....**

**ನಾನು ಹೀಗೇ ಹಂಬಲಿಸುತ್ತಾ ನನ್ನ ಮಗನಿರುವ ಪಾತಾಳವನ್ನು ಸೇರುವೆನು ಅಂದನು."**

ಹೌದು! ಇಲ್ಲಿ "**ಶಿಯೋಲ್**" ಎಂಬ ಇಬ್ರಿಯ ಪದಕ್ಕೆ "ಪಾತಾಳ" ಎಂದು ಕೊಡಲಾಗಿದೆ.

ಆದ್ದರಿಂದ ಮೊದಲು ಓದಿದ ವಾಕ್ಯದಲ್ಲಿ "**ಶಿಯೋಲ್**' ಎಂಬ ಪದಕ್ಕೆ ಹಳೆಯ ಒಡಂಬಡಿಕೆಯಲ್ಲಿ ನರಕ ಮತ್ತು ಪಾತಾಳ (ಗೋರಿ) ಎಂದು ಭಾಷಾಂತರಿಸಲಾಗಿದೆ.

## ಆದ್ದರಿಂದ ನರಕದ ನಿಜವಾದ ಅರ್ಥವೇನು?

ಬಹುಶಃ "**ಶಿಯೋಲ್**" ಎಂಬ ಇಬ್ರಿಯ ಪದದಿಂದ "**ನರಕ**"**ದ** ಅರ್ಥವು ಖಾತರಿಯಾಗುತ್ತದೆ.

## ಯೆಶಾಯ 38:18

**" ಪಾತಾಳದವರು (ಶಿಯೋಲ್) ನಿನ್ನನ್ನು ಸ್ತುತಿಸರು, ಸತ್ತವರು ನಿನ್ನನ್ನು ಕೀರ್ತಿಸರು, ಅಧೋಲೋಕಕ್ಕೆ ಇಳಿದು ಹೋದವರು ನಿನ್ನ ಸತ್ಯಸಂಧತೆಯನ್ನು ಆಶ್ರಯಿಸಲಾರರು "**

ಹೌದು! ಇಲ್ಲಿ "ಶಿಯೋಲ್" ಎಂಬ ಪದವನ್ನು **ಪಾತಾಳ**(ಗೋರಿ) ಎಂದು **ಅರ್ಥ ವಿವರಣೆ** ಮಾಡಿ ಭಾಷಾಂತರಿಸಲಾಗಿದೆ.



ಮತ್ತು **ಸತ್ತ ಸ್ಥಿತಿ** ಎಂದೂ ಮತ್ತು **ಅಧೋಲೋಕ (ಅಂದರೆ ಕುಳಿ)** ಎನ್ನಲಾಗಿದೆ.

ಆದ್ದರಿಂದ "ಶಿಯೋಲ್" ಎಂಬ ಪದವನ್ನು 31 ಸಾರಿ ಪಾತಾಳವೆಂದೂ ಮತ್ತು 3 ಸಾರಿ ಕುಳಿಯೆಂದೂ ಮತ್ತು
31 ಸಾರಿ "**ನರಕ**"ವೆಂದೂ ಭಾಷಾಂತರಿಸಲಾಗಿದೆ.

**ಆದ್ದರಿಂದ ನರಕ... ಎಂದರೆ ಪಾತಾಳ ಅಥವಾ ಕುಳಿ ಅಥವಾ ಹೂತಿಟ್ಟ ಸ್ಥಿತಿ!**

ಇದರಲ್ಲಿ ಧಗಧಗನೆ ಉರಿಯುವ ಬೆಂಕಿಯೆಂದು ಅಥವಾ ಅದಕ್ಕೆ ಸಂಬಂಧಪಟ್ಟ ಅರ್ಥ ಬರುವುದಿಲ್ಲ.

ಆದರೆ ಹಳೆಯ ಒಡಂಬಡಿಕೆಯ ಕೆಲವು ವಾಕ್ಯಗಳನ್ನು ನೋಡುವಾಗ "ಶಿಯೋಲ್" ಎಂಬ ಪದಗಳ ಅರ್ಥ ಇದಕ್ಕೆ **ವಿರುದ್ಧವಾಗಿದೆಯೆಂದು** ನೋಡುತ್ತೇವೆ.

**ಶಿಯೋಲ್** ಅಥವಾ **ನರಕ** ಒಂದು "ಕತ್ತಲೆಯ" ಸ್ಥಿತಿಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಬ 10:21**

**"ನಾನು ಅಂಧಕಾರದಿಂದಲೂ ಮರಣಾಂಧಕಾರದಿಂದಲೂ ತುಂಬಿದ ದೇಶಕ್ಕೆ ಹೋಗುವುದರೊಳಗೆ...."**

ನರಕ ಅಥವಾ ಶಿಯೋಲ್ ಕಿರುಚಾಟ ಮತ್ತು ಸಂಕಟಗಳಿಲ್ಲದ ಒಂದು ಮೌನವಾದ ಸ್ಥಳವೆಂದು **ಕೀರ್ತನೆ 115:17** ರಲ್ಲಿ ಓದುತ್ತೇವೆ.

**"ಸತ್ತವರು ಯಾಹುವನ್ನು ಸ್ತುತಿಸುವುದಿಲ್ಲ; ಮೌನಲೋಕವನ್ನು ಸೇರಿದವರಲ್ಲಿ ಯಾರೂ ಆತನನ್ನು ಕೀರ್ತಿಸುವುದಿಲ್ಲ"**

ನರಕ ಅಥವಾ ಶಿಯೋಲ್ ಯಾತನೆ ಅಥವಾ ವ್ಯಥೆಗಳಿಲ್ಲದ ಮರೆತು ಹೋಗಿರುವ ಸ್ಥಿತಿಯೆಂದು

**ಕೀರ್ತನೆ 88:11,12** ರಲ್ಲಿ ಓದುತ್ತೇವೆ.

**"ಸಮಾಧಿಯಲ್ಲಿ ನಿನ್ನ ಕೃಪೆಯನ್ನೂ ನಾಶಲೋಕದಲ್ಲಿ ನಿನ್ನ ಸತ್ಯತೆಯನ್ನೂ ಸಾರುವದುಂಟೋ? ಕತ್ತಲೆಯ ಲೋಕದಲ್ಲಿ ನಿನ್ನ ಮಹತ್ಕಾರ್ಯಗಳೂ ಮರವೆಯ ದೇಶದಲ್ಲಿ ನಿನ್ನ ನೀತಿಯೂ ತಿಳಿಯಲ್ಪಡುವವೋ?"**

ನರಕ ಅಥವಾ ಶಿಯೋಲ್ ಎಂಬುದು ಏನೂ ಇಲ್ಲದಿರುವ ಸ್ಥಳವೆಂದು

ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಸಂಗಿ 9:10**

**"ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ ಇರುವದಿಲ್ಲ."**

**ಆದ್ದರಿಂದ ಶಿಯೋಲ್ ಅಥವಾ ನರಕವು "ಮರಣದ ಸ್ಥಿತಿ"**

ಆದ್ದರಿಂದ ಹಳೆಯ ಒಡಂಬಡಿಕೆಯಲ್ಲಿ ನರಕವೆಂದರೆ **ಮರಣದ ಸ್ಥಿತಿ** ಅಥವಾ ... ಪಾತಾಳ ಅಥವಾ ... ಕುಳಿ

**ಎಲ್ಲಾ ಸ್ಮಾರಕಗಳಲ್ಲಿ ಒಂದು ಹಲಗೆಯನ್ನು ಹಾಕಿ ಅದರಲ್ಲಿ ಹೀಗೆ ಬರೆಯಬೇಕು "ನರಕ"ವೆಂಬುದು ಒಂದು ಕುಳಿ ಮತ್ತು ಮರಣದ ಸ್ಥಿತಿ. ಇದೇ ಹಳೆಯ ಒಡಂಬಡಿಕೆಯಲ್ಲಿ ನರಕ ಮತ್ತು ಶಿಯೋಲ್ ಎಂಬುದಕ್ಕೆ ನಿಜವಾದ ಅರ್ಥ.**



ಈಗ **ಹೊಸ ಒಡಂಬಡಿಕೆಯಲ್ಲಿ** ನರಕಕ್ಕೆ ಭಾಷಾಂತರಿಸಿರುವ **ಮೂರು** ಪದಗಳನ್ನು ಕುರಿತು ಅಭ್ಯಾಸ ಮಾಡೋಣ –

ಮೊದಲ ಗ್ರೀಕ್ ಪದವು ಯಾವುದೆಂದರೆ –




## (HADES) (9 ಸಾರಿ ಉಪಯೋಗಿಸಲ್ಪಟ್ಟಿದೆ.)

ಇದು "**ಶಿಯೋಲ್**" ಎಂಬ ಇಬ್ರಿಯ ಪದದ ಸಮಾನ ಅರ್ಥವಾಗಿದೆ. ಮತ್ತು ಕುಳಿಯನ್ನು ಸೂಚಿಸುತ್ತದೆ.

ಕೆಳಗಿನ ವಾಕ್ಯಗಳನ್ನು ಹಳೆಯ ಒಡಂಬಡಿಕೆಯಲ್ಲಿ ನೋಡುವಾಗ ಮತ್ತು "**ಹೇಡ್ಸ್**" ಎಂದು ಹೊಸ ಒಡಂಬಡಿಕೆಯಲ್ಲಿ ಕೊಟ್ಟಿರುವುದನ್ನು ನೋಡುತ್ತೇವೆ –

**ಕೀರ್ತನೆ 16:10 / ಅಪೊಸ್ತಲರ ಕೃತ್ಯಗಳು 2:27**

**"ಯಾಕೆಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ (Sheol) ಬಿಡುವುದಿಲ್ಲ"**

**"ಯಾಕೆಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ (Hades) ಬಿಡುವುದಿಲ್ಲ"**

ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವುದಿಲ್ಲ.
ನೀವು ನೋಡಿದಿರಾ!

ಭಾಷೆಗಳು ಬದಲಾದಂತೆ ಪದಗಳು ಬದಲಾಗುತ್ತವೆ – **ಮೂಲ ಅರ್ಥ** ಅದೇ ಆಗಿರುತ್ತದೆ

ಹೇಗೆ ಆಂಗ್ಲ ಭಾಷೆಯಲ್ಲಿ ನೀರಿಗೆ "ವಾಟರ್" ಎಂದೂ ಫ್ರೆಂಚ್ ಭಾಷೆಯಲ್ಲಿ "ಯಿಯಾಕ್ಸ್" **(eaux)** ಎಂದೂ, ಪೋರ್ಚುಗೀಸ್ ಭಾಷೆಯಲ್ಲಿ "ಆಗ್ವ" **(agua)** ಮತ್ತು ಹಿಂದಿಯಲ್ಲಿ "ಪಾನಿ" ಮತ್ತು

ತಮಿಳಿನಲ್ಲಿ "ತಣ್ಣೀರ್" ಎಂದೂ ಕರೆಯಲಾಗುತ್ತದೆ.

➡ **ಭಾಷೆ ಬದಲಾದಂತೆ ಮೂಲವಸ್ತುವಾದ ನೀರು ಬದಲಾಗುತ್ತದೆಯೇ?**

ನಿಶ್ಚಯವಾಗಿಯೂ ಇದರ ಉತ್ತರ - ಇಲ್ಲ !

**ಅದೇ ರೀತಿ ಇಲ್ಲಿ "ಹೇಡ್ಸ್" ಎಂಬ ಪದದ ಅರ್ಥವೂ ಸಹ ಹಾಗೆಯೇ.**

ಯೇಸು ನರಕಕ್ಕೆ ಹೋದನೆಂದು ಸಹ ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಅಪೋಸ್ತಲರ ಕೃತ್ಯಗಳು 2:31**

**"‥ ಕ್ರಿಸ್ತನ ಪುನರುತ್ಥಾನವನ್ನೇ ಕುರಿತು - ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನುಭವಿಸುವದಿಲ್ಲವೆಂತಲೂ ಹೇಳಿದನು"**



ಹೌದು! ಯೇಸು ಸಹ **ನರಕ** ಅಥವಾ "**ಹೇಡ್ಸ್**"ನಲ್ಲಿ ಮೂರು ದಿನಗಳ ಕಾಲ ಇದ್ದನು.

ಆತನು 3 ದಿನಗಳವರೆಗೂ "ಮರಣದ ಸ್ಥಿತಿಯಲ್ಲಿ" ಅಥವಾ ಕುಳಿಯಲ್ಲಿ ಭಾನುವಾರ ಆತನ ಪುನರುತ್ಥಾನ ವಾಗುವವರೆಗೆ ಇದ್ದನೆಂದು ನೋಡುತ್ತೇವೆ.



ಊಹಿಸಿ ನೋಡಿರಿ! ಒಂದು ವೇಳೆ **ನರಕ** ಅಥವಾ "**ಹೇಡ್ಸ್**" ಎಂಬುದು ಯಾತನೆಯ ಸ್ಥಳವಾಗಿದ್ದರೆ ಯೇಸು ಸಹ ಆ ಯಾತನೆಯ ಸ್ಥಳಕ್ಕೆ ಹೋಗ ಬೇಕಾಗಿತ್ತು!

➡ **ಆದರೆ ಇಲ್ಲ!**

ಸತ್ಯವು ಬಹಳ ಸುಲಭವಾಗಿದೆ!

ಹೌದು! ಯೇಸು ಸಹ **ನರಕ** ಅಥವಾ "**ಹೇಡ್ಸ್**"ನಲ್ಲಿ ಅಂದರೆ "ಮರಣದ ಸ್ಥಿತಿ"ಯಲ್ಲಿ 3 ದಿನಗಳ ಕಾಲ ಇದ್ದನೆಂದು ಓದುತ್ತೇವೆ. ಸತ್ಯವೇದವು ಹೇಳುವುದೇನೆಂದರೆ –

....ಆತನು ಪಾತಾಳದಲ್ಲಿ **(ನರಕದಲ್ಲಿ)** ಬಿಡಲ್ಪಡಲಿಲ್ಲ .....

ಈ "ಬಿಡಲ್ಪಡಲಿಲ್ಲ" ಎಂಬುದು **ಸೂಚಿಸುವುದೇನೆಂದರೆ** ಯೇಸು ಕ್ರಿಸ್ತನ ಎರಡನೆಯ ಬರುವಿಕೆಯವರೆಗೂ **(ಉಳಿದ)** ಎಲ್ಲಾ ಮನುಷ್ಯ ಜಾತಿಯೂ **ನರಕದಲ್ಲಿ** (ಅಥವಾ ಸಮಾಧಿಯಲ್ಲಿ) ಬಿಡಲ್ಪಟ್ಟಿತು.

ಹೌದು! ಯೇಸು 3 ನೇ ದಿನದಲ್ಲಿ ಪುನರುತ್ಥಾನ ಹೊಂದಿದನು, ಉಳಿದ ಎಲ್ಲಾ ಮನುಷ್ಯ ಜಾತಿ ಪುನರುತ್ಥಾನ ಹೊಂದಲು ಯೇಸುವಿನ **ಎರಡನೆಯ ಬರುವಿಕೆಯುವರೆಗೆ** ಕಾಯಬೇಕು!!

ಇದಲ್ಲದೆ ಯೇಸು ಇನ್ನೂ ಹೇಳುವುದೇನೆಂದರೆ ಆತನ ಬಳಿ "**ಮರಣದ** ಮತ್ತು **ಪಾತಾಳದ** (ಹೇಡ್ಸ್) ಬೀಗದ ಕೈಗಳು ಅವೆ"

ಇದರ ಅರ್ಥವೇನು? ಕೆಳಗಿನ ವಾಕ್ಯಗಳನ್ನು ಓದೋಣ :–

**ಪ್ರಕಟಣೆ 1:18**

"**ಸತ್ತವನಾದೆನು; ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ.**"

ಇದು ಸಾಂಕೇತಿಕವಾದ ಭಾಷೆಯೆಂದು ನಮಗೆ ಗೊತ್ತಿದೆ. ಮತ್ತು "ಬೀಗದ ಕೈಗಳು" ಎಂದರೆ ಬಾಗಿಲು **ತೆರೆಯುವುದನ್ನು** ಸೂಚಿಸುತ್ತದೆ ಮತ್ತು ಈ ವಿಷಯದಲ್ಲಿ ಇದು ಅವಕಾಶದ ಬಾಗಿಲನ್ನು ಮತ್ತು ಬೀಗದ ಕೈಗಳನ್ನು ಪಡೆದುಕೊಳ್ಳುವುದು ಅಧಿಕಾರ ಪಡೆದಿರುವುದನ್ನು ಸೂಚಿಸುತ್ತದೆ.

ಹಾಗಾದರೆ ಯೇಸು ಮಾತನಾಡುತ್ತಿರುವ ಈ "**ಬೀಗದ ಕೈಗಳು**" ಯಾವುವು? ಮತ್ತು "**ಮರಣ ಹಾಗೂ ಪಾತಾಳ**" ಏನನ್ನು ಸೂಚಿಸುತ್ತದೆ?

ಇವೆರಡೂ ಮಾತುಗಳು ಒಂದೇ ಆಗಿವೆಯೇ?

**ಇದಕ್ಕೆ ಉತ್ತರ ಇಲ್ಲ !**

ಈ ವಿಷಯದ ಅರ್ಥವನ್ನು ಯೇಸು ತನ್ನ ಮಾತಿನಲ್ಲಿ ಸೂಚಿಸಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಲೂಕ 9:60** – "**ಸತ್ತವರೇ ತಮ್ಮವರಲ್ಲಿ ಸತ್ತು ಹೋದವರ ಉತ್ತರ ಕ್ರಿಯಗಳನ್ನು ಮಾಡಲಿ**"

ಹೌದು! ಇಲ್ಲಿ ಎರಡು "**ಸತ್ತವರು**" ಎಂಬುದು ಆದಾಮನ ಕುಟುಂಬ ಮತ್ತು ಅದರ ಸ್ಥಿತಿಯನ್ನು ಸೂಚಿಸುತ್ತದೆ –

ಕೆಲವರು **ಮೊದಲೇ ಸತ್ತು ಹೋಗಿದ್ದಾರೆ** ಮತ್ತು ಉಳಿದವರು ... ಮರಣದ ಅಥವಾ ಸತ್ತ ಸ್ಥಿತಿಯಲ್ಲಿದ್ದಾರೆ **ಆದರೆ.... ಇನ್ನೂ ಬದುಕಿದ್ದಾರೆ.**

ಇವರೇ **ಸತ್ತ** ಅಥವಾ **ಜೀವವಿಲ್ಲದ** "**ಸತ್ತವರು**" ಮತ್ತು ... ಬದುಕುತ್ತಾ "ಸತ್ತವರು"

ಆದ್ದರಿಂದ ಯೇಸುವಿನ ಬಳಿಯಿರುವ **ಬೀಗದ ಕೈಗಳು** ಯಾವುವೆಂದರೆ –

**1**

## ಮರಣ

**ಬದುಕುತ್ತಾ "ಸತ್ತವರಾದ" ಲೋಕದ ಜನರ ಮೇಲಿನ ಅಧಿಕಾರ.**

**2**

## ನರಕ / ಹೇಡ್ಸ್

**ಕುಳಿಯೆಂಬ ಸೆರೆಮನೆಯ ಮೇಲಿನ ಅಧಿಕಾರ. ಸತ್ತ "ಸತ್ತವರಾದ" ಎಲ್ಲಾ ಮನುಷ್ಯ ಜಾತಿ.**



**ಹೌದು! ಯೇಸು ತನ್ನ ಎರಡನೆಯ ಬರುವಿಕೆಯಲ್ಲಿ ಸತ್ತಿರುವ ಮತ್ತು ಬದುಕಿರುವವರೆಲ್ಲರ ಮರಣ ದಂಡನೆಯನ್ನು ತೆಗೆದು ಹಾಕಲು ದೇವರಿಂದ ಅಧಿಕಾರ ಪಡೆದಿದ್ದಾನೆ !**

ಇದನ್ನು ಅಪೊಸ್ತಲರ ಕೃತ್ಯಗಳು 10:42ರಲ್ಲಿ ಖಚಿತಪಡಿಸಿರುವುದನ್ನು ಓದುತ್ತೇವೆ –

**"ಆತನೇ ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿ ದೇವರಿಂದ ನೇಮಕವಾದವನು"**

ಈಗ **ಒಂದು ಪಟ್ಟಣವು ನರಕಕ್ಕೆ ಹೋಗುವುದನ್ನು** ಕುರಿತು ಓದುತ್ತೇವೆ!

ಹೌದು ! ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 11:23**

**"ಎಲಾ ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವೆಯಾ? ಪಾತಾಳಕ್ಕೇ (ನರಕಕ್ಕೇ) ಇಳಿಯುವಿ."**

ಹೌದು! ಇಲ್ಲಿ ಕಪೆರ್ನೌಮೆ ಎಂಬ **ಪಟ್ಟಣವು ನರಕ** ಅಥವಾ **ಹೇಡ್ಸ್‌ಗೆ** ಹೋಗುವುದನ್ನು ನೋಡುತ್ತೇವೆ.

## ಕಪೆರ್ನೌಮೆಗೆ ಏನಾಗಿತ್ತು?

ಕಪೆರ್ನೌಮ್ (ಇಬ್ರಿಯ ಭಾಷೆಯಲ್ಲಿ"ಕೆಫೆರ್‌ನಚುಮ್" – "ನಹುಮಿನ ಸಣ್ಣ ಹಳ್ಳಿ") ಗಲಿಲಾಯ ಸಮುದ್ರದ ದಡದ ಹತ್ತಿರವಿತ್ತು. ಇದು ಈಗ **ಪಾಳು ಬಿದ್ದಿದೆ.**

ಇದು ಕ್ರಿ. ಪೂ. 150 ರಿಂದ ಕ್ರಿ. ಶ. 750. ರವರೆಗೆ ಜನನಿವಾಸವಾಗಿತ್ತು. (ವಿಷಯ ಸಂಗ್ರಹಣೆ ಗೂಗಲ್ **(google)** ವೆಬ್‌ಸೈಟ್ ವಿಕಿಪೀಡಿಯಾದಿಂದ **(wikipeidia)** ಹೌದು!

**ಕಪೆರ್ನೌಮ್** ಪಟ್ಟಣವು ಯೇಸುವಿನ ಪ್ರವಾದನೆಯ ಪ್ರಕಾರ 1838 ರ ವರೆಗೆ ನೂರಾರು ವರ್ಷಗಳು ಮುಚ್ಚಿ ಹೋಗಿತ್ತು ಎಡ್ವರ್ಡ್ ರಾಬಿನ್‌ಸನ್ **(Edward Rabinson)** ಒಬ್ಬ ಅಮೇರಿಕ ಪರಿಶೋಧಕ ಹಾಳಾದ ಈ ಪ್ರಾಚೀನ ಪಟ್ಟಣವನ್ನು ಕಂಡು ಹಿಡಿದನು.



ಆದ್ದರಿಂದ ನಾವು ನೋಡುವುದೇನೆಂದರೆ **ಹೇಡ್ಸ್ (Hades)** ನಿಂದ ಭಾಷಾಂತರಿಸಲ್ಪಟ್ಟ ನರಕವು "ಮರಣದ ಸ್ಥಿತಿಯಾಗಿದೆ" ಅಥವಾ .......ಸಮಾಧಿಯಲ್ಲಿ ಇಟ್ಟಿರುವ....... ಸ್ಥಿತಿಯಾಗಿದೆ ಅದೇ ರೀತಿ ಇಬ್ರಿಯ ಪದವಾದ **ಶಿಯೋಲ್** ಕೂಡ ಹಾಗಿದೆ.

ಈಗ ಇನ್ನೊಂದು ಕುತೂಹಲ ವಿಷಯವನ್ನು ಕುರಿತು ಓದೋಣ :-

**ಪ್ರಕಟಣೆ 20:13,14**

**"ಸಮುದ್ರವು ತನ್ನೊಳಗಿದ್ದ ಸತ್ತವರನ್ನು ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು......ಆಮೇಲೆ ಮೃತ್ಯುವೂ, ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು."**

ಇಲ್ಲಿ "ಪಾತಾಳ" (ನರಕವು "ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು") ಎಂದು ಓದುತ್ತೇವೆ.

ಆದದ್ದರಿಂದ ಸತ್ಯವೇದವು ನಮಗೆ ಬೋಧಿಸುವುದೇನೆಂದರೆ ನರಕದಲ್ಲಿರುವವರೆಲ್ಲರೂ ... **ಹೊರಗೆ ಬರುತ್ತಾರೆ!**

**ಮತ್ತು ನಂತರ ಏನಾಗುತ್ತದೆ?**

ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ – **ಪ್ರಕಟನೆ** 20:14 –

**"ಆಮೇಲೆ ಮೃತ್ಯುವೂ, ಪಾತಾಳವು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು"**

ಹೌದು! **ಸತ್ತ ಮನುಷ್ಯರಿದ್ದ ನರಕವೇ** "ಬೆಂಕಿಯ ಕೆರೆಯಲ್ಲಿ" ನಾಶವಾಯಿತು!

**ಇದು ಹೇಗೆ ಸಾಧ್ಯ?**

**ಒಳ್ಳೆಯದು! ಇದು ಸಾಂಕೇತಿಕ ಭಾಷೆ! ನೆನಪಿಡಿ ಇದು ಪ್ರಕಟನೆ ಪುಸ್ತಕ!**

ಇದು "ಮರಣದ ಸ್ಥಿತಿ (ಅವಸ್ಥೆ)ಯ" ಕೊನೆ ಅಥವಾ ನಾಶನವನ್ನು ಸೂಚಿಸುತ್ತದೆ. ಎಲ್ಲರೂ ಪುನರುತ್ಥಾನ ಹೊಂದುವುದರ ಮೂಲಕ (**ಅಪೋಸ್ತಲರ ಕೃತ್ಯಗಳು 24:15**)

ಇದು ಆಗುತ್ತದೆ ಎಂದು ನೋಡುತ್ತೇವೆ. ಹೀಗೆ ನರಕ ಅಥವಾ **ಕುಳಿ**/ ಪಾತಾಳ ಅಥವಾ **ಮರಣದ ಸ್ಥಿತಿಯಲ್ಲಿರುವವರೆಲ್ಲರೂ**

ಕ್ರಿಸ್ತನ ಸಂಭಂದದಿಂದ (ಎಲ್ಲರೂ) ಜೀವಿತರಾಗುವರು (**1 ಕೊರಿಂಥ 15:22**)

ಹೌದು! **ಸತ್ತವರೆಲ್ಲರೂ** ಕ್ರಿಸ್ತನ ರಾಜ್ಯದಲ್ಲಿ ಮರಣದಿಂದ **ಎಚ್ಚೆತ್ತುಕೊಳ್ಳುವರು** ಅಥವಾ

ಪುನರುತ್ಥಾನ ಹೊಂದುವರು.

ಆಗ **ಮರಣದ ಸ್ಥಿತಿ** (ಅವಸ್ಥೆ) ಅಥವಾ **ನರಕವು** ಇಲ್ಲದೆ ಅಳಿದು ಹೋಗುತ್ತದೆ.

ಈಗ ನರಕವನ್ನು ಕುರಿತು ಭಾಷಾಂತರಿಸಿರುವ **ಗ್ರೀಕ್‌ನ ಎರಡನೆಯ ಪದವನ್ನು** ನೋಡೋಣ –



## 2. ಟಾರ್ಟರೂ / ಟಾರ್ಟರಸ್ (1 ಸಾರಿ)

## (TARTAROO / TARTARUS)

ಈ ಗ್ರೀಕ್‌ನ ಎರಡನೆಯ ಪದವು ಸತ್ಯವೇದದಲ್ಲಿ **ಒಂದೇ ಒಂದು ಸಾರಿ** "ನರಕ"ವೆಂದು ಭಾಷಾಂತರಿಸಲಾಗಿದೆ!

ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಪೇತ್ರ 2:4**

"ಹೇಗಂದರೆ ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವುದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೇ ಗುಂಡಿಗಳಿಗೆ ಒಪ್ಪಿಸಿದನು."

ಈ ವಾಕ್ಯವು ಮನುಷ್ಯರಿಗೆ **ಸೂಚಿಸುವುದೇ ಇಲ್ಲವೆಂದು** ನಾವು ನೋಡುತ್ತೇವೆ!

ಇದು ನರಕದಲ್ಲಿರುವ ದೇವದೂತರನ್ನು ಸೂಚಿಸುತ್ತದೆ!

**ಈಗ, ನರಕದಲ್ಲಿರುವ ದೇವದೂತರು ಎಂದರೇನು?**

ಶಿಯೋಲ್" ಮತ್ತು ""ಹೇಡ್ಸ್" ಎಂಬುದು **ಮರಣದ ಸ್ಥಿತಿ** ಅಥವಾ **ಕುಳಿ(ಗುಂಡಿ)** ಎಂದು ಮೊದಲೇ ನೋಡಿದ್ದೇವೆ.

**ದೇವದೂತರಿಗಿರುವ ಈ ನರಕ ಯಾವುದು?**

ಗ್ರೀಕ್ ಪದದಲ್ಲಿ "ನರಕಕ್ಕೆ" **ಟಾರ್ಟರೂ** ಅಥವಾ **ಟಾರ್ಟರಸ್** ಎಂದು ಹೇಳುತ್ತಾರೆ.

ಅದಕ್ಕೆ ಅರ್ಥ... **ಭೂಮಿಯ ವಾಯುಮಂಡಲ!!**

ಇದನ್ನು ಕೆಳಗಿನ ವಾಕ್ಯದಲ್ಲಿ ಖಚಿತಪಡಿಸಲಾಗಿದೆ –

## ಎಫೆಸ 6:12

**"ನಾವು ಹೋರಾಡುವದು ಮನುಷ್ಯಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ."**

ಹೌದು! ಕೆ.ಜೆ.ವಿ.ಯಲ್ಲಿ ಉನ್ನತ ಸ್ಥಳವೆಂದು ಎನ್.ಐ.ವಿ.ಯಲ್ಲಿ ಆಕಾಶದ



ಕ್ಷೇತ್ರ ಅಥವಾ ರಾಜ್ಯವೆಂಬುದು **ಭೂಮಿಯ ವಾಯುಮಂಡಲವನ್ನು** ಸೂಚಿಸುತ್ತದೆ.

**(ತಮಿಳಿನಲ್ಲಿ ಇದಕ್ಕೆ "ವಾನಮಂಡಲಂ" ಎಂದು, ಅಂದರೆ ಭೂಮಿಯ ವಾಯುಮಂಡಲ ಎಂಬ ಸ್ಪಷ್ಟವಾದ ಅರ್ಥ.)**

ಈ ವಾಯುಮಂಡಲದಲ್ಲಿ ದೇವದೂತರು ಮತ್ತು ದೇವರ ವಿರೋಧಿಯಾದ ಸೈತಾನನನ್ನು ಇಡಲಾಗಿದೆ.

ಒಂದು ವೇಳೆ ನಮಗೆ ಆತ್ಮೀಕ ಕಣ್ಣುಗಳಿದ್ದರೆ ಆಕಾಶದಲ್ಲಿ ಪಕ್ಷಿಗಳು ನೋಡುವ ಹಾಗೆ ಅವರುಗಳು ಹಾರಾಡುವುದನ್ನು ನೋಡಬಹುದಾಗಿತ್ತು.

**ಈಗ ಮುಂದೆ ಕೊಟ್ಟಿರುವ ವಾಕ್ಯದ ಅರ್ಥವೇನು?**

ಕತ್ತಲೆ ಗುಂಡಿಗಳಿಗೆ [ಸರಪಣಿಗಳಿಗೆ (ಕೆ.ಜೆ.ವಿಯಲ್ಲಿ)] ಒಪ್ಪಿಸಿದನು.

ಇಲ್ಲಿ "ಗುಂಡಿಗಳು" (ಸರಪಣಿಗಳು) ಮತ್ತು ಕತ್ತಲೆ ಎಂಬುದು ಸಾಂಕೇತಿಕ ಭಾಷೆ ಮತ್ತು ನೇರವಾದ ಭಾಷೆಯಲ್ಲ, ಏಕೆಂದರೆ ಈ ಬಿದ್ದುಹೋದ ದೂತರು **ಭೂಮಿಯ ವಾಯುಮಂಡಲದಲ್ಲಿದ್ದಾರೆಂದು** ನಾವು ನೋಡಿದ್ದೆವು. ಮತ್ತು ಭೂಮಿಯ ಮೇಲೆ ಕತ್ತಲೆ ಮತ್ತು ಬೆಳಕು **ರಾತ್ರಿ** ಮತ್ತು **ಹಗಲು** ಆದಂತೆಲ್ಲಾ ಬದಲಾಗುತ್ತಲೇ ಇರುತ್ತದೆ.

**ಮತ್ತು ಭೂಮಿಯ ಮೇಲೆ ಶಾಶ್ವತವಾದ ಕತ್ತಲೆ ಇರುವುದಿಲ್ಲ.!!**

## ಹಾಗಾದರೆ ಈ ಸಂಕೇತಗಳ ಅರ್ಥವೇನು?

"ಸರಪಣಿಗಳು" ಎಂಬುದು **ನಿರ್ಬಂಧವನ್ನು** ಸೂಚಿಸುತ್ತದೆ.

ದೇವರು ಸೃಷ್ಟಿಸಿರುವ ವಿಶ್ವದಲ್ಲಿ ದೇವದೂತರು ಮೊದಲು ಸುತ್ತಾಡುತ್ತಿದ್ದಂತೆ ಈಗ ಸುತ್ತಾಡಲು ಅವರಿಗೆ ಅನುಮತಿಸಿಲ್ಲ!!!

ಇದು ನಮ್ಮ ಮನೆಗೆ ಯಾರಾದರೂ ಬಂಧುಗಳು ಭೇಟಿಯಾದರೆ ನಮ್ಮ ನಾಯಿಯನ್ನು **ಓಡಾಡಲು ಬಿಡದೆ ಕಟ್ಟಿ ಹಾಕಿದಂತೆ.**



## ಈ ದೂತರಿಗೆ ನಿರ್ಭಂದಿತವಾದ ಸ್ಥಳ ಯಾವುದು?

ನಾವು ಹೀಗೆ ಓದುತ್ತೇವೆ

… **ಕತ್ತಲೆ ಸರಪಣಿಗಳು**

ಇದು ಲೋಕವು ಈಗಿರುವ ಸ್ಥಿತಿಯನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### ಯೆಶಾಯ 60:2

"ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ."

ಹೌದು! ಆ ದೂತರಿಗೆ ನಿರ್ಭಂದಿತವಾದ ಸ್ಥಳ ಯಾವುದೆಂದರೆ ... **ಭೂಮಿ.**

ಇದನ್ನು ಕೆಳಗಿನ ವಾಕ್ಯದಲ್ಲಿಯೂ ಸಹ ಖಚಿತಪಡಿಸಿದೆ –

### ಎಫೆಸ 2:2

".. ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ"

ಹೌದು! ಭೂಮಿಯ **ವಾಯುಮಂಡಲವೇ** ದೂತರಿಗೆ **ನರಕ** ಅಥವಾ **ಕುಳಿ(ಗುಂಡಿ)**

ಮನುಷ್ಯರಿಗೆ ಪ್ರತಿಯೊಂದು ಸ್ಥಳಗಳಲ್ಲಿ ಹೇಗೆ ಸ್ಮಾರಕಗಳಿವೆಯೋ (ಕುಳಿ) ಹಾಗೆಯೇ ದೂತರಿಗೆ ಒಂದೇ ಒಂದು ಕುಳಿ ಇದೆ.

ಅದರ ಹೆಸರು "**ಭೂಮಿ**".

ಈಗ ನರಕಕ್ಕೆ ಗ್ರೀಕ್‌ನ **ಮೂರನೇ** ಪದವನ್ನು ನೋಡೋಣ –



## 3. ಗೆಹೆನ್ನಾ (GEHENNA) (12 ಸಾರಿ)

ಇದು "ನರಕ 3ನೇ ಗ್ರೀಕ್ ಪದವಾಗಿ ಭಾಷಾಂತರಿಸಲಾಗಿದೆ ಎಂದು ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ.

ಆರ್.ಎಸ್.ವಿ. ಸತ್ಯವೇದದ ಅಡಿ ಟಿಪ್ಪಣಿಯನ್ನು (Foot Note) ಓದಿರಿ.

ಈಗ ಕೆಳಗಿನ ವಾಕ್ಯವನ್ನು ಓದೋಣ –

### ಮಾರ್ಕ 9 :43-48

"ಇದಲ್ಲದೆ ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕತ್ತರಿಸಿಬಿಡು; ಎರಡು ಕೈಯುಳ್ಳವನಾಗಿದ್ದು ಆರದ ಬೆಂಕಿಯಾಗಿರುವ ನರಕದಲ್ಲಿ ಬೀಳುವದಕ್ಕಿಂತ ಕೈಕಳಕೊಂಡವನಾಗಿ ಜೀವದಲ್ಲಿ ಸೇರುವುದು ನಿನಗೆ ಉತ್ತಮ. ಮತ್ತು ನಿನ್ನ ಕಾಲು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದುಬಿಡು;

ಎರಡು ಕಾಲುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಕಾಲುಕಳಕೊಂಡವನಾಗಿ ಜೀವದಲ್ಲಿ ಸೇರುವುದು ನಿನಗೆ ಉತ್ತಮ. ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಡು; ಎರಡು ಕಣ್ಣುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಒಂದೇ ಕಣ್ಣುಳ್ಳವನಾಗಿದ್ದು ದೇವರ ರಾಜ್ಯದಲ್ಲಿ ಸೇರುವದು ನಿನಗೆ ಉತ್ತಮ. ನರಕದಲ್ಲಿ ಅವರನ್ನು ಕಡಿಯುವ ಹುಳ ಸಾಯುವದಿಲ್ಲ, ಬೆಂಕಿ ಆರುವದಿಲ್ಲ."

## ಈ ವಾಕ್ಯಗಳು ನೇರವಾದ ಭಾಷೆಯೆ?

**ಯಾವ ಕ್ರೈಸ್ತರಾದರೂ ನಮ್ಮ ಕರ್ತನು ಹೇಳಿದಂತೆ ನೇರವಾಗಿ (ನಿಜವಾಗಿ) ಅನುಸರಿಸಿದ್ದಾರೆಯೆ?**

ಈ ವಾಕ್ಯವು ಹೇಳಿದಂತೆ ಯಾರಾದರೂ ಅನುಸರಿಸಿ


**"ಕುರುಡರು ಅಥವಾ ಕುಂಟರು" ಆಗಿರುವವರು ಇರುವರೇ?**

ನಿಶ್ಚಯವಾಗಿಯೂ ಇಲ್ಲ!

**ಹಾಗಾದರೆ ಯೇಸು ಹೇಳಿದ ಈ ವಾಕ್ಯಕ್ಕೆ ಅರ್ಥವೇನು?**

ಇಲ್ಲಿ ಯೇಸು ಹೇಳಿದ ನರಕವೆಂಬ ಗ್ರೀಕ್ ಪದವು ಯಾವುದೆಂದರೆ :–

## ಗೆಹೆನ್ನಾ (GEHENNA)



**ಗೆಹೆನ್ನಾ ಎಂಬುದಕ್ಕೆ ಅರ್ಥವೇನು?**

ಗೆಹೆನ್ನಾ ಎಂಬುದು ಇಬ್ರಿಯ ಭಾಷೆಯಲ್ಲಿ ಯೆರೂಸಲೇಮ್ ಪಟ್ಟಣದ ಆಚೆಯಿರುವ

**ಹಿನ್ನೋಮ್ ಕಣಿವೆಯ ಸ್ಥಳ(ತಗ್ಗು).**

(ಹಳೆಯ ನಿಘಂಟಿನ ನಕಲನ್ನು ಗಮನಿಸಿ – ಪುಟ–3)

**ಹಿನ್ನೋಮ್ ಕಣಿವೆಯಲ್ಲಿ ಎಂತಹ ನರಕವಿತ್ತು?**

ಕೆಳಗಿನ ವಾಕ್ಯವನ್ನು ಓದೋಣ –

**ಯೆರೇಮೀಯ 7:31**

**"ತಮ್ಮ ಗಂಡು ಹೆಣ್ಣು ಮಕ್ಕಳನ್ನು ಆಹುತಿಕೊಡುವದಕ್ಕೆ ಬೆನ್ ಹಿನ್ನೋಮ್ ತಗ್ಗಿನಲ್ಲಿನ ತೋಫೆತೆಂಬ ಪೂಜಾಸ್ಥಳವನ್ನು ಕಟ್ಟಿದ್ದಾರೆ; ನಾನು ಆ ಸಂಸ್ಕಾರವನ್ನು ವಿಧಿಸಲಿಲ್ಲ, ನನ್ನ ಮನಸ್ಸಿನಲ್ಲಿ ಹುಟ್ಟಲೂ ಇಲ್ಲ."**



ಹೌದು! ಇಸ್ರಾಯೇಲ್ಯರು ಇತರ ದೇವರುಗಳನ್ನು ಆರಾಧಿಸಿ ತಮ್ಮ ಮಕ್ಕಳನ್ನು ಬೆಂಕಿಗೆ ಆಹುತಿ ಕೊಡುತ್ತಿದ್ದರು!

ಆದರೆ ನಂತರ ಅವರು ಮಾನಸಾಂತರ ಹೊಂದಿದರು ಮತ್ತು ... ಅದೇ ಸ್ಥಳವನ್ನು ನಗರದ ಕಸದ ತೊಟ್ಟಿಯನ್ನಾಗಿ ಮಾಡಿದರು!!

ಇಲ್ಲಿ ಕಸ ಮತ್ತು ಸತ್ತ (ನಾಯಿಗಳು, ಇಲಿಗಳು, ಇದಲ್ಲದೆ ಶಿಲುಬೆಗೆ ಹಾಕಿದ ಅಪರಾಧಿಗಳ) ಹೆಣಗಳನ್ನು ಹಾಕಲಾಗುತ್ತಿತ್ತು.

ಕಸದ ಪರಿಮಾಣವನ್ನು ಹತೋಟಿಯಲ್ಲಿಡಲು ಆಗಾಗ್ಗೆ **ಬೆಂಕಿಯನ್ನಿಡಲಾಗುತ್ತಿತ್ತು** ಮತ್ತು ಆ ಎಲ್ಲಾ ಕಸಗಳು ಬೂದಿಯಾಗುತ್ತಿತ್ತು.

ಸತ್ತ ಹೆಣಗಳಿಂದ **ಹುಳುಗಳು ಬಂದು** ಮಾಂಸವನ್ನು ತಿನ್ನುತ್ತಿದ್ದವು.

## ಹೌದು! ಇದು ಸರ್ವನಾಶನದ ಚಿತ್ರವಾಗಿದೆ!

**ನರಕದಲ್ಲಿ ಅವರನ್ನು ಕಡಿಯುವ ಹುಳ ಸಾಯುವುದಿಲ್ಲ, ಬೆಂಕಿ ಆರುವುದಿಲ್ಲ**

ಇವು **ನಾಶನಕ್ಕೆ ಸಾಂಕೇತಿಕವಾಗಿದೆ.** ಹೇಗೆಂದರೆ

- "ಬೆಂಕಿ" ಯು **ಕಸವನ್ನು** ಬೂದಿಮಾಡುತ್ತದೆ.
- ಮತ್ತು "ಹುಳುಗಳು" **ಸತ್ತ ಮಾಂಸವನ್ನು** ತಿನ್ನುತ್ತವೆ.

## ಆದ್ದರಿಂದ ಇಲ್ಲಿ ಯೇಸು ಸರ್ವನಾಶನದ ನರಕ ಕುರಿತು ಇಲ್ಲಿ ಮಾತನಾಡುತ್ತಿದ್ದಾರೆಂದು ನೋಡುತ್ತೇವೆ

ಈ "ನರಕವು" "**ಮರಣದ ಸ್ಥಿತಿ**" ಅಥವ ಕುಳಿಯನ್ನು ಸೂಚಿಸುವ "ನರಕ"ಕ್ಕಿಂತ ಬಹಳ ವ್ಯತ್ಯಾಸವಾಗಿದೆ.

ಇಲ್ಲಿ "ನರಕ" ಎಂಬುದು **ಸರ್ವನಾಶನವನ್ನು** ಸೂಚಿಸುತ್ತದೆ.

**ಆತನ ವಾರ್ತೆಗೆ ನಿಜವಾದ ಅರ್ಥವೇನು?**

ಆತನು ಉಪಯೋಗಿಸಿರುವ ಸಂಕೇತಗಳನ್ನು ಒಂದೊಂದಾಗಿ ಅಭ್ಯಾಸ ಮಾಡುವಾಗ ನಾವು ಅರ್ಥಮಾಡಿಕೊಳ್ಳಬಹುದು.

**Vs – 43 - " ಇದಲ್ಲದೆ ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕತ್ತರಿಸಿ ಬಿಡು"**

ಇಲ್ಲಿ "ಕೈ" ಎಂಬುದು **ನೇರವಾದ ಭಾಷೆಯನ್ನು** ಸೂಚಿಸುವುದಿಲ್ಲ.

ಆದರೆ "ಕೈ" ಎಂಬುದು ಸಾಂಕೇತಿಕ ಭಾಷೆಯಾಗಿದೆ.

**"ಕೈ" ಎಂಬುದು ಏನನ್ನು ಸೂಚಿಸುತ್ತದೆ?**



**ಇಲ್ಲಿ "ಕೈ" ಎಂಬುದು ಗೆಳೆತನವನ್ನು ಸೂಚಿಸುತ್ತದೆ.**

ಸಾಮಾನ್ಯವಾಗಿ ಹೀಗೆ ಹೇಳುತ್ತಾರೆ –

"ಅಮೇರಿಕಾ ರಷ್ಯಾಗೆ ತನ್ನ ಕೈಯನ್ನು ಚಾಚಿದೆ".

ಅಂದರೆ **ಸ್ನೇಹದ ಬಂಧನವನ್ನು** ಸೂಚಿಸುತ್ತದೆ...

ಕ್ರಿಸ್ತೀಯ ಬೆಳವಣಿಗೆಗೆ ತಡೆಯುಂಟು ಮಾಡುವಂತಹ ಪಾಪ ಮತ್ತು ಲೌಕಿಕ

"ಸ್ನೇಹ" ವನ್ನು ಕುರಿತು ನಮ್ಮ ಕರ್ತನು ಇಲ್ಲಿ ಎಚ್ಚರಿಸುತ್ತಿದ್ದಾರೆ.

ನಾವು **ಸತ್ಯವನ್ನು** ಸ್ವೀಕರಿಸುವ ಸಮಯದಲ್ಲಿ ಅನೇಕ ಗೆಳೆತನಗಳಿದ್ದಿರಬಹುದು ಅದನ್ನು **ಮುಂದುವರೆಸಿ ಪ್ರೋತ್ಸಾಹಿಸಿದರೆ ಕ್ರಿಸ್ತನ ಪ್ರತಿರೂಪವನ್ನು** ಹೊಂದುವುದಕ್ಕೆ ಬಹಳ ದೊಡ್ಡ ತಡೆಯುಂಟಾಗುತ್ತದೆ.

ಅವರು ಸ್ವಭಾವ ಮತ್ತು ಮಾತುಕತೆಗಳಲ್ಲಿ ಲೌಕೀಕರಾಗಿರುತ್ತಾರೆ ಮತ್ತು ಇವರ ಸ್ನೇಹವು ಬಾಲ್ಯದಿಂದಲೇ ಇದ್ದಿರಬಹುದು!!!



ಆದರೆ ಇವರ ಸ್ನೇಹವು ಹೀಗೆ ಮುಂದುವರೆದರೆ "ಇಹಲೋಕದ ಆತ್ಮ" **ಹೆಚ್ಚುತ್ತದೆ** ಮತ್ತು "ಪವಿತ್ರಾತ್ಮ"ವು **ಕಡಿಮೆಯಾಗುತ್ತದೆ.**

ಹೌದು! ಇಂತಹ ಸ್ನೇಹಗಳನ್ನು "ಕಡಿದುಬಿಡಬೇಕೆಂದು" ನಮ್ಮ ಕರ್ತನು ಹೇಳುತ್ತಾನೆ!!!

ನಂತರ ನಾವು ಹೀಗೆ ಓದುತ್ತೇವೆ.

**Vs – 45 - "ಮತ್ತು ನಿನ್ನ ಕಾಲು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಡು"**

ಇಲ್ಲಿ ಕಾಲು ಎಂಬುದು ಮತ್ತೆ ಒಂದು ಸಂಕೇತವಾಗಿದೆ!

## ಇದು ಏನನ್ನು ಸೂಚಿಸುತ್ತದೆ?

**ಇಲ್ಲಿ "ಕಾಲು" ಎಂಬುದು ವಿವಿಧ ಸ್ಥಳಗಳನ್ನು ಸೂಚಿಸುತ್ತದೆ.**

ನಮ್ಮ ಕರ್ತನು ಎಚ್ಚರಿಸುವುದೇನೆಂದರೆ **"ನಿನ್ನ ಕಾಲು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ"** ಅಂದರೆ ಕ್ರಿಸ್ತೀಯ ಬೆಳವಣಿಗೆಗೆ ತಡೆಯನ್ನುಂಟು ಮಾಡುವಂತಹ ಸ್ಥಳಗಳಾದ ಚಿತ್ರಮಂದಿರಗಳು, ಕದುರೆ ರೇಸ್‌ಗಳು, ಜೂಜಾಟದ ಸ್ಥಳಗಳು, ಬಾರ್‌ಗಳು, ಸ್ನೇಹಿತರ ಪಾರ್ಟಿಗಳು, ಡಿಸ್ಕೋಗಳು ಮುಂತಾದವುಗಳನ್ನು ಸೂಚಿಸುತ್ತದೆ.

ಹೌದು! ಇಂತಹ ಸ್ಥಳಗಳೆಲ್ಲಾ **ಮನೋರಂಜನೆ** ಮತ್ತು **ವಿಶ್ರಾಂತಿಗಾಗಿ** ಹುಡುಕಿಕೊಂಡು ಹೋಗುವ ಲೌಕಿಕ ಜನರಿಗಾಗಿದೆ.

ಆದರೆ ಕ್ರಿಸ್ತನ ಪ್ರತಿರೂಪ ಹೊಂದುವುದಕ್ಕಾಗಿ ಪ್ರಯತ್ನಿಸುತ್ತಿರುವ ಕ್ರೈಸ್ತರಿಗೆ ಇದು **ತಡೆಯಾಗಿದೆ** ಹಾಗೂ ಅವರಲ್ಲಿ ಇರುವ "ಪವಿತ್ರಾತ್ಮ"ನನ್ನು ಅದು ನಾಶ ಮಾಡುತ್ತದೆ.

ಹೌದು! ಕ್ರಿಸ್ತನ ಪ್ರತಿರೂಪ ಹೊಂದುವುದಕ್ಕಾಗಿ ಪ್ರಯತ್ನಿಸುತ್ತಿರುವವರಿಗೆ ಲೌಕಿಕತ್ವವು ತಡೆಯಾಗುವುದರಿಂದ ಅಂತಹ ಸ್ಥಳಕ್ಕೆ ಹೋಗುವುದನ್ನು **"ನಿಲ್ಲಿಸಬೇಕು"** ಅಥವಾ **"ಕಡಿದು ಬಿಡಬೇಕೆಂದು"** ಎಂದು ನಮ್ಮ ಕರ್ತನು ಎಚ್ಚರಿಸುತ್ತಾನೆ.



ನಂತರ ನಾವು ಹೀಗೆ ಓದುತ್ತೇವೆ –

**Vs – 47 - "ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಡು"**

ಇಲ್ಲಿಯೂ ಸಹ "ಕಣ್ಣು" ಎಂಬುದು ಒಂದು ಸಂಕೇತವಾಗಿದೆ!

**ಇದು ಏನನ್ನು ಸೂಚಿಸುತ್ತದೆ?**

**"ಕಣ್ಣು" ಎಂಬುದು ದೃಷ್ಟಿಯನ್ನು ಸೂಚಿಸುತ್ತದೆ. ಮತ್ತು ಇಲ್ಲಿ ಸಾಂಕೇತಿಕವಾಗಿದೆ!!**

ಇಲ್ಲಿ ನಮ್ಮ ಕ್ರಿಸ್ತೀಯ ಬೆಳವಣಿಗೆಗೆ ತಡೆ ಮತ್ತು ಅಡ್ಡಿಯಾಗುವಂತಹ "**ದೃಷ್ಟಿಯ ತಡೆಗಳು**" ಪಾಪದಲ್ಲಿ ಸಿಕ್ಕಿಸುವುದರ ಬಗ್ಗೆ ಎಚ್ಚರಿಸುತ್ತಾನೆ.

ಯೇಸುಕ್ರಿಸ್ತನ ಹಾಗೆ ಬೆಳವಣಿಗೆಯಾಗುವುದೇ ಒಬ್ಬ ಕ್ರೈಸ್ತನ ಜೀವನದ ಗುರಿ – ಇದನ್ನು ಕುರಿತು ವಿವರವಾಗಿ ಅಭ್ಯಾಸ 17,18 ಮತ್ತು 19ರಲ್ಲಿ ಅಭ್ಯಾಸ ಮಾಡಲಿದ್ದೇವೆ.




ಈ ದೃಷ್ಟಿಯು ತಡೆಗಳು (ವಸ್ತುಗಳು) ಯಾವುದೆಂದರೆ – ಅಶ್ಲೀಲ ಪತ್ರಿಕೆಗಳು, ಪುಸ್ತಕಗಳು, **ಚಲನಚಿತ್ರಗಳು** ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ದೂರದರ್ಶನ ಅದರಲ್ಲಿ ಬರುವ ಅನೇಕ ಚಾನಲ್‌ಗಳು.



ಇವೆಲ್ಲವೂ ಅಮೂಲ್ಯವಾದ ಸಮಯವನ್ನು ವ್ಯಯಮಾಡುವುದಲ್ಲದೆ... ಹೃದಯ ಮತ್ತು ಸ್ವಭಾವಗಳಲ್ಲಿ ಲೌಕೀಕ ಆತ್ಮವನ್ನು ಹುಟ್ಟಿಸಿ ಅದನ್ನು ಉತ್ತೇಜಿಸುತ್ತಾ ಹೋಗುತ್ತದೆ.

ಅವುಗಳನ್ನು "ಕಿತ್ತು ಬಿಸಾಡಬೇಕು" ಅಥವಾ ಅಂಥಹ ಅಭ್ಯಾಸವನ್ನು **ನಿಲ್ಲಿಸಬೇಕು!**

ಹೌದು! ಕ್ರೈಸ್ತರು ಪಾಪ ಮತ್ತು ಮರಣದಿಂದ (ಎಚ್ಚೆತ್ತು) ಬದುಕಿದ್ದೇವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಎಫೆಸ 2 : 1

**"ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು"**

ಆದ್ದರಿಂದ ಬದುಕಿಸಲ್ಪಟ್ಟಿರುವವರು ಇಂತಹ ಕ್ರೈಸ್ತ **ಜೀವಿತದಿಂದ** ಮತ್ತೆ ಪಾಪದ ದಾರಿಗಳಿಗೆ ಹಿಂದಕ್ಕೆ **ಹೋಗಬಾರದು** – ಇಲ್ಲವಾದಲ್ಲಿ
ಅವನು(ಳು) **ಮತ್ತೆ ಸಾಯುತ್ತಾನೆ(ಳೆ)** – **ಇದೇ ಎರಡನೆಯ ಮರಣ!**

ಇಲ್ಲಿ ! **ನರಕ** ಅಥವಾ **ಗೆಹೆನ್ನಾ** ಎಂಬುದು ಬೆಂಕಿ ಮತ್ತು "ಹುಳ"ಗಳಿಗೆ ಸಾಂಕೇತಿಕವಾಗಿದ್ದು **ನಾಶವಾಗುವ ಎರಡನೆಯ ಮರಣದ** ಚಿತ್ರಣವಾಗಿದೆ. ಇಲ್ಲಿ **ಮೊದಲನೆಯ ಮರಣದಿಂದ** (1 ಕೊರಿಂಥ 15 : 22) ಬಿಡುಗಡೆ ಇರುವಂತೆ ಈ ಎರಡನೆ ಮರಣದಿಂದ **ಬಿಡುಗಡೆ ಇರುವುದಿಲ್ಲ.**

**ಇಲ್ಲಿ "ಎರಡನೆಯ ಮರಣ"ವನ್ನು ನರಕ ಅಥವಾ ಮರಣದ ಸ್ಥಿತಿಯೆಂದು ಭಾಷಾಂತರಿಸಲಾಗಿದೆ.**
**ಆದರೆ ಇದರ ಸಾಂಕೇತ "ಬೆಂಕಿ ಮತ್ತು ಹುಳುಗಳು" ಸರ್ವನಾಶನವನ್ನು ಸೂಚಿಸುತ್ತದೆ.**

ಈ **ನರಕ** ಅಥವಾ **"ಗೆಹೆನ್ನಾ"** ಎಂಬುದನ್ನು ಮತ್ತೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಮತ್ತಾಯ 10:28

**"ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ"**

ಹೌದು! ಇಲ್ಲಿ ನರಕದಲ್ಲಿ (ಗೆಹೆನ್ನಾ) ನಾಶವಾಗುವ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ ಹೊರತು ಯಾತನೆಯಲ್ಲಿ ಸಂರಕ್ಷಿಸುವ ಬಗ್ಗೆ ಹೇಳುವುದಿಲ್ಲ.

ದೇಹ ಮತ್ತು ಆತ್ಮ (ಜೀವದ ಅಧಿಕಾರ)ವನ್ನು "**ಆತನೇ**" (ದೇವರು) ನಾಶಮಾಡಬಲ್ಲಾತನು. ಜೀವವನ್ನು ಕೊಡುವಾತನು!

ಸ್ವಯಿಚ್ಛೆಯಿಂದ ಪಾಪಮಾಡುವವರೆಲ್ಲರೂ ಈ ರೀತಿಯಾಗಿ ನಾಶವಾಗುವರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಪ್ರಕಟನೆ 21:8**

**"ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು, ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು"**

ಹೌದು! ಇಲ್ಲಿ "ಎರಡನೆಯ ಮರಣ" ಎಂದರೆ "ಮೊದಲನೆಯ ಮರಣದಲ್ಲಿ" **ಮೊದಲೇ ಸತ್ತವರು, ಒಮ್ಮೆ ಸತ್ತು** ಮತ್ತೆ ಜೀವಿಸುವುದನ್ನು ಸೂಚಿಸುತ್ತದೆ!

ಆದರೆ ಅವರು **ಸ್ವಯಿಚ್ಛೆಯಿಂದ ಪಾಪಿಗಳು** ಮತ್ತು **ದೇವರಿಗೆ** ಮತ್ತು **ನೀತಿಗೆ ವಿರೋಧಿಗಳಾಗಿರುವುದರಿಂದ** ಮತ್ತೆ ಸಾಯುವರು. ಮತ್ತು ಅದು "ಎರಡನೆಯ ಮರಣ"ವಾಗಿದೆ.

ಇಂತಹ ವರ್ಗದಲ್ಲಿರುವವರನ್ನು ಕುರಿತು ಹೀಗೆ ಓದುತ್ತೇವೆ.

**ಯೆಶಾಯ 26:10**

ದುಷ್ಟರನ್ನು ಕರುಣಿಸಿದರೂ ಅವರು
ಧರ್ಮ ಜ್ಞಾನವನ್ನು ಪಡೆಯರು;
ಯಹೋವನ ಮಹಿಮೆಯನ್ನು
ಲಕ್ಷಿಸದೆ
ಯಥಾರ್ಥವಂತರ ದೇಶದಲ್ಲಿಯೂ
ಅನ್ಯಾಯವನ್ನಾಚರಿಸುವರು



**ಆದ್ದರಿಂದ ಪಾಪಕ್ಕೆ ದೇವರು ಕೊಡುವ ದಂಡನೆ ಯಾವಾಗಲೂ... ಮರಣ. ರೋಮಾ 6:23**

☞ **"ಪಾಪವು ಕೊಡುವ ಸಂಬಳ ಮರಣ"**

ಈ ಮರಣ"ದ ಸ್ಥಿತಿಯೇ ... ಸತ್ಯವೇದದ ನರಕ – ಮೊದಲ ಮರಣಕ್ಕೆ ಪುನರುತ್ಥಾನವುಂಟು ಆದರೆ ...

ಎರಡನೆಯಮರಣದಲ್ಲಿ ಸಂಪೂರ್ಣ ನಾಶನ ಮತ್ತು ಜೀವ ನಿರ್ನಾಮವಾಗುವುದು.

ಈ ವಿಷಯದಲ್ಲಿ ಇನ್ನೂ ಸಂದೇಹವಿರುವವರಿಗೆ ಮತ್ತು ದುಷ್ಟರಿಗೆ ದೇವರು ಕೊಡುವ ದಂಡನೆ ನರಕ ಅಥವಾ **ನಿತ್ಯ ಯಾತನೆ** ಎಂಬ ಅನಿಸಿಕೆ ಇರುವವರಿಗೆ ಖಚಿತಪಡಿಸಲು ಕೆಳಗಿನ ಕೆಲವು ವಾಕ್ಯಗಳನ್ನು ಓದೋಣ –

**ಕೀರ್ತನೆ 37:9,10**

**"ಕೆಡುಕರು ತೆಗೆದು ಹಾಕಲ್ಪಡುವರು. ಇನ್ನು ಸ್ವಲ್ಪಕಾಲದೊಳಗೆ ದುಷ್ಟನು ಕಾಣೆಸದೆ ಹೋಗುವನು; ಅವನಿದ್ದ ಸ್ಥಳದಲ್ಲಿ ಎಷ್ಟು ವಿಚಾರಿಸಿದರೂ ಅವನು ಸಿಕ್ಕುವುದೇ ಇಲ್ಲ"**

ಮತ್ತೆ ಇದೇ ವಿಷಯವನ್ನು ಕುರಿತು ಹೀಗೆ ಓದುತ್ತೇವೆ.

**ಕೀರ್ತನೆ 145:20**

**" ಆದರೆ ಎಲ್ಲಾ ದುಷ್ಟರನ್ನು ಸಂಹರಿಸುತ್ತಾನೆ"**

ಮತ್ತೆ ಇನ್ನೊಂದು ಸ್ಥಳದಲ್ಲಿ ಹೀಗೆ ಓದುತ್ತೇವೆ –

**ಕೀರ್ತನೆ 73:27**

**"ಇಗೋ ನಿನ್ನನ್ನು ಬಿಟ್ಟವರು ನಾಶವಾಗುವರು; ನಿನಗೆ ದ್ರೋಹಮಾಡಿದವರೆಲ್ಲರನ್ನು ನಿರ್ಮೂಲ ಮಾಡುತ್ತೀ"**

ಹೌದು! ದುಷ್ಟರಿಗೆ ದೇವರು ಕೊಡುವ ದಂಡನೆ **ನಾಶನವೆಂದು** ಸ್ಪಷ್ಟವಾಗಿದೆ ಮತ್ತು **ಯಾತನೆಯ ಸ್ಥಳವಲ್ಲ**!!

ಆದರೆ ಇನ್ನೂ ಕೆಲವರು ಸತ್ಯವೇದವು **ನರಕವನ್ನು** ಕುರಿತು ಯಾತನೆಯ ಸ್ಥಳವೆಂದು ಹೇಳುತ್ತದೆಂದು ಒತ್ತಿ ಹೇಳುತ್ತಾರೆ.

ಇದಕ್ಕೆ ಕೆಳಗಿನ ವಾಕ್ಯವನ್ನು ಆಧಾರವಾಗಿಟ್ಟುಕೊಂಡಿದ್ದಾರೆ –

**ಪ್ರಕಟನೆ 20:10**

**"ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆಪಡುತ್ತಿರುವರು."**

ಈ **ವಾಕ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡು** "ಯಾತನೆಯ" ಶಾಸ್ತ್ರವನ್ನು ನಿರೂಪಿಸುತ್ತಾರೆ!!

ಆದರೆ ಇಲ್ಲಿ ಗಮನಿಸುವಾಗ **ಒಂದೇ ಒಂದು** ಮೃಗವೂ ... **ಒಂದೇ ಒಂದು** ಸುಳ್ಳು ಪ್ರವಾದಿಯೂ ಮತ್ತು **ಒಬ್ಬನೇ** ಸೈತಾನನ್ನು ಕುರಿತು ಇಲ್ಲಿ ಹೇಳುತ್ತದೆ!

**ಇದು ಮನುಷ್ಯ ಜಾತಿಯನ್ನು ಕುರಿತು ಹೇಳುವುದೇ ಇಲ್ಲ!**

**ಈ ವಾಕ್ಯವು ಏನನ್ನು ಮತ್ತು ಯಾರನ್ನು ಸೂಚಿಸುತ್ತದೆ ?**

ಈ ವಿಷಯದಲ್ಲಿನ ಆಳವಾದ ಸತ್ಯಗಳನ್ನು ಮುಂದಿನ ತರಗತಿಗಳಲ್ಲಿ ಅಭ್ಯಾಸ ಮಾಡೋಣ.

ಇಂದಿನ ಆಭ್ಯಾಸವನ್ನು ಮುಕ್ತಾಯ ಮಾಡುವುದಕ್ಕೆ ಮೊದಲು ಹೊಸ ಒಡಂಬಡಿಕೆಯ **ಅನೇಕ ಸ್ಥಳಗಳಲ್ಲಿ ನರಕವನ್ನು ಸೂಚಿಸುವಂತೆ ತೋರುವ** ವಾಕ್ಯಗಳನ್ನು ನೋಡೋಣ, ಕೆಳಗಿನ ವಾಕ್ಯವನ್ನು ಓದೋಣ:-

## ಮತ್ತಾಯ 13:41,42

**"ಅವರು ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನೂ ಅಧರ್ಮಿಗಳನ್ನೂ ಕೂಡಿಸಿ ಬೆಂಕೀ ಕೊಂಡದಲ್ಲಿ ಹಾಕುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು."**

ಇಂತಹ ವಾಕ್ಯಗಳನ್ನು ಮತ್ತಾಯ **8:12 , 22:13 , 24:51 , 25:30** ಮತ್ತು ಲೂಕ **13:28**ರಲ್ಲಿ ಕಾಣಬಹುದು.

**ಈ ವಾಕ್ಯ ಏನನ್ನು ಸೂಚಿಸುತ್ತದೆ ಮತ್ತು ಇದರ ಅರ್ಥವೇನು?**

ಮೊದಲನೆಯದಾಗಿ ಇದು ನರಕವನ್ನು **ಸೂಚಿಸುವುದಿಲ್ಲ** ಆದರೆ ಇವು... **ಸಂಕೇತಗಳಾಗಿವೆ** ಮತ್ತು **ಇದಕ್ಕೆ ಸಾಂಕೇತಿಕ** ಅರ್ಥಗಳಿವೆ.!!

ಮತ್ತಾಯ 13:42 ರಲ್ಲಿನ ಸಾಂಕೇತಿಕ ಅರ್ಥವನ್ನು ನೋಡೋಣ –

**ಬೆಂಕೀ ಕೊಂಡ**

ಇದು **ನ್ಯಾಯ ತೀರಿಸುವುದಕ್ಕೆ** ಸಾಂಕೇತಿಕವಾಗಿದೆ ಎಂದು **ಯೆಶಾಯ 66:15,16** ರಲ್ಲಿ ಓದುತ್ತೇವೆ.

"ಆಹಾ, ಯೆಹೋವನು ಬೆಂಕಿಯನ್ನು ಕಟ್ಟಿ ಕೊಂಡು ಬರುವನು; ಆತನ ರಥಗಳು ಬಿರುಗಾಳಿಯಂತಿರುವವು; ರೌದ್ರಾವೇಶದಿಂದ ತನ್ನ ಸಿಟ್ಟನ್ನು ತೀರಿಸುವನು, ಅಗ್ನಿ ಜ್ವಾಲೆಯಿಂದ ಖಂಡಿಸುವನು. ಯೆಹೋವನು ಅಗ್ನಿಯಿಂದಲೂ ತನ್ನ ಖಡ್ಗದಿಂದಲೂ ಎಲ್ಲಾ ನರಜನ್ಮದವರಿಗೂ ನ್ಯಾಯತೀರಿಸುವನು; ಆಗ ಆತನಿಂದ ಹತರಾಗುವವರು ಬಹುಜನ."



ಹೌದು! ಈ **"ಬೆಂಕಿಯ ಕೊಂಡವು"** ಎರಡನೆಯ ಲೋಕದ ಕೊನೆಯಲ್ಲಿನ ಅಂತಿಮ ತೀರ್ಪುಗಳನ್ನು ಸೂಚಿಸುತ್ತದೆ ಮತ್ತು ಎಲ್ಲಾ ಕೆಟ್ಟ ವ್ಯವಸ್ಥೆಗಳು ನಾಶವಾಗುತ್ತವೆ. ಮತ್ತು ಈ ಲೋಕಕ್ಕೆ ಒಂದು ಮುಕ್ತಾಯ ಬರುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ. –

## ಮಲಾಕಿಯ 4:1

"ಇಗೋ, ಆ ದಿನವು ಬರುತ್ತಿದೆ, ಒಲೆಯಂತೆ ಉರಿಯುತ್ತಿದೆ; ಸಕಲ ಅಹಂಕಾರಿಗಳು ದುಷ್ಕರ್ಮಿಗಳು ಹೊಟ್ಟಿನಂತಿರುವರು; ಬರುತ್ತಿರುವ ಆ ದಿನವು ಅವರಿಗೆ ಅಗ್ನಿಪ್ರಳಯವಾಗುವುದು; ಬುಡ ರೆಂಬೆಗಳಾವುದನ್ನೂ ಉಳಿಸದು."

ಮತ್ತು ಕೆಳಗಿನ ವಾಕ್ಯದಲ್ಲಿಯೂ ಸಹ ಓದುತ್ತೇವೆ. –

## 2 ಪೇತ್ರ 3:10

"...ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು"

 **"ಹೊರಗಿನ ಕತ್ತಲೆ"**

ಸತ್ಯದ ಹೊರಗಿನ ಜಗತ್ತಿಗೆ ಸಾಂಕೇತಿಕವಾಗಿದೆ. ಇದು **ಅಸತ್ಯದ** ಸ್ಥಿತಿ ಎಂದು ಯೆಶಾಯ 60:2ರಲ್ಲಿ ಓದುತ್ತೇವೆ.

"ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ;"

**ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ**

ಬಹಳ ದುಃಖಕ್ಕೆ ಸಾಂಕೇತಿಕವಾಗಿದೆಯೆಂದು ಲೂಕ 13:28 ರಲ್ಲಿ ಓದುತ್ತೇವೆ.

" ಅಬ್ರಹಾಮ, ಇಸಾಕ, ಯಾಕೋಬ ಇವರು ಮತ್ತು ಎಲ್ಲಾ ಪ್ರವಾದಿಗಳು ದೇವರ ರಾಜ್ಯದಲ್ಲಿರುವದನ್ನೂ ನಿಮ್ಮನ್ನು ಮಾತ್ರ ಹೊರಗೆ ಹಾಕುವದನ್ನೂ ನೀವು ನೋಡುವಾಗ ನಿಮಗೆ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು."

ಹೌದು! ಇದು **ನ್ಯಾಯತೀರ್ಪು ಮತ್ತು ಅದರ ಪರಿಣಾಮವನ್ನು ಸೂಚಿಸುತ್ತದೆ!!**

ಇಲ್ಲಿ ಯೇಸು ಯೆಹೂದ್ಯರ ನಾಯಕರಿಗೆ, ಭೂಮಿಯ ರಾಜ್ಯದಲ್ಲಿ ಅವರು **ಅಬ್ರಹಾಮ, ಇಸಾಕ, ಯಾಕೋಬ** ಮತ್ತು ಎಲ್ಲಾ ಪ್ರವಾದಿಗಳು **ಪ್ರಮುಖ ಸ್ಥಾನದಲ್ಲಿರುವರು** ಆದರೆ ಈ ನಾಯಕರು ತಮ್ಮ ನಾಯಕತ್ವದಿಂದ ತೆಗೆಯಲ್ಪಟ್ಟಿರುವುದನ್ನು ತಿಳಿದು – **ಅವರ ಭಾಗದ ಸ್ಥಿತಿಯನ್ನು ಕುರಿತು ಬಹಳ ದುಃಖಿಸುವರು!!** ಎಂಬುದಾಗಿ ತಿಳಿಸುತ್ತಾರೆ.

**ಕೊನೆಯದಾಗಿ ಸಹೋದರ / ಸಹೋದರಿಯರೇ, ನರಕ ಎಂಬುದರ ಸತ್ಯವನ್ನು ಅರಿತುಕೊಂಡ ಮೇಲೆ, ಇದು ದೇವರ ನ್ಯಾಯವಾದ ದಂಡನೆಯಲ್ಲವೆ?**

ಅಹಾ! ಹೌದು! "**ಪಾಪವು ಕೊಡುವ ಸಂಬಳ ಮರಣ**" ಇದು ನಿಜವಾಗಿಯೂ

**ಹೌದು! ಏಕೆಂದರೆ, ದೇವರು ಮತ್ತು ಆತನ ಮನೋಭಾವನೆಯನ್ನು ಕುರಿತು ಏನು ಓದುತ್ತೇವೆ?**

ಈ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ. –

**ಯೆಹೆಜ್ಕೇಲ 33:11, 18:32**

"ನನ್ನ ಜೀವದಾಣೆ ದುಷ್ಟನ ಸಾವಿನಲ್ಲಿ ನನಗೆ ಲೇಶವಾದರೂ ಸಂತೋಷವಿಲ್ಲ; ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ಬಾಳುವುದೇ ನನಗೆ ಸಂತೋಷ


ಸಾಯುವವರ ಸಾವಿನಲ್ಲಿ ನನಗೆ ಸಂತೋಷವಿಲ್ಲ; ತಿರುಗಿಕೊಂಡು ಬಾಳಿರಿ; ಇದು ಕರ್ತನಾದ ಯೆಹೋವನ ನುಡಿ."

**ಹೌದು! ದೇವರಿಗೆ ಒಬ್ಬ ಪಾಪಿಯ ಮರಣದಲ್ಲಿ ಸಂತೋಷವಿಲ್ಲ ಆದರೆ ಅವರು ಜೀವ ಮತ್ತು ನೀತಿಯ ಕಡೆಗೆ ತಿರುಗಿಕೊಳ್ಳಬೇಕೆಂದು ಎದುರು ನೋಡುತ್ತಾನೆ.**


ಆದುದರಿಂದ ಈ ದಿನ ನಾವು ನರಕವನ್ನು ಕುರಿತು ಸತ್ಯಾಂಶವನ್ನು ಸತ್ಯವೇದದ ಆಧಾರದಿಂದ ಅರಿತುಕೊಂಡೆವು.

ಕೊನೆಯದಾಗಿ ಸಹೋದರ ಸಹೋದರಿಯರೇ ಇಂದು ನಾವು ಕೇಳಿದ ಈ ಸತ್ಯವನು ಕುರಿತು ಹೊರಗೆ ಲೋಕದಲ್ಲಿ ಹೋಗಿ, ನರಕವಿಲ್ಲವೆಂದು ಹೇಳದೆ ಬದಲಾಗಿ ನರಕವನ್ನು ಕುರಿತು ಈ ಲೋಕದ ಎಲ್ಲಾ ಧರ್ಮಗಳೂ ಮತ್ತು ಹೆಚ್ಚಿನ ಕ್ರೈಸ್ತ ಧರ್ಮದವರೂ ಬೋಧಿಸುವಂತೆ ಸತ್ಯ ವೇದದಲ್ಲಿ ಹೇಳಲ್ಪಟ್ಟಿಲ್ಲ, ಸತ್ಯ ವೇದವು ನರಕದ ಬಗ್ಗೆ ಬಹಳ ವ್ಯತ್ಯಾಸವಾಗಿರುವ ಸತ್ಯವನ್ನು ನಮಗೆ ತಿಳಿಸುತ್ತದೆ ಎಂದು ಹೇಳಿರಿ.

**ಈ ಪಾಠದಿಂದ ದೇವರು ನಮಗೆ ನರಕ ಎಂದರೇನು ಎಂಬುದನ್ನು ಮತ್ತು ಅದರಲ್ಲಿರುವ ಸತ್ಯಾಂಶವನ್ನು ತಿಳಿಸಿ ಕೊಟ್ಟಿದ್ದಾರೆ. ದೇವರಿಗೆ ಮಹಿಮೆ ಉಂಟಾಗಲಿ.**



For Private Circulation Only




NOT FOR SALE

For more Subjects contact: MESSENGERS OF CHRIST E-mail: thekingdom1_6@yahoo.com